ತಗತಿದ್ರು. ಇವ್ರೆಲ್ಲಾ ವ್ಯಾಪಾರ ಮಾಡೋದು ನೋಡಿ ಹೊಟ್ಟೆಕಿಚ್ಚು ಬಂದಂಗಾತು. ಅಭಿ ಹುಟ್ಟಿದಾಗಿಂದ ಸ್ವಸ್ವಲ್ಪ ಕೂದಲು ಉದ್ರಕತ್ತಾಯವಂತ ಕೂದಲೆಣ್ಣೆ ಮಾರುವವನ ಹತ್ತಿರಬಂದೆ. ಬಂದಿದ್ದು ನೋಡಿ 'ಏಯ್, ಸವಿತಕ್ಕ ನಿನಗ್ಯಾಕ ಬೇಕು, ಈ ಕೂದ್ಲೆಣ್ಣೆ? ನಿನ್ ಕೂದ್ಲನೇ ಐದಾರು ಮಂದಿಗೆ ಆಗಷ್ಟು ರಾಶಿ ಬೆಳದಾವು. ನೋಡಿದ್ರ ನಮ್ಗ ಹೊಟ್ಟೆಕಿಚ್ಚಾಗ್ತದ.' ಅಂತ ಕೂದಲೆಣ್ಣೆ ತಗಂದು ಕೂದ್ಲಂಬವು ಕುಂಡಿಗೆ ಇಳಿಬಿದ್ದೋರಂಗ ಅಳ್ಳಾಡಿಸುತ್ತ ಮೈ ಉಕ್ಕರಿಸುತ್ತ ಹೋದ್ಲು. ಸಣ್ಣೀರವ್ವನಂತೆ ನೀಲವ್ವ, ಸುಟ್ಟಿ, ಹಂಪವ್ವನೂ ತಗಂದು ಮೂಗು ಮರ್ಕಂತ ದಿಡಿಗಿಲೆ ಹೋದ್ರು. ಇವ್ರೆಲ್ಲಾ ಹೋದಮ್ಯಾಲೆನೆ ಕೂದಲೆಣ್ಣೆ ಮಾರುವವನು ತೆಳ್ಗಮ್ಯಾಗ ಹುಳುಹುಳು ನೋಡಿ ಅಭಿನ ಗಲ್ಲ ಹಿಂಡಿ ಏನೋ ವಿಚಾರಮಾಡಿ ಕೂದಲೆಣ್ಣೆನ ಒಮ್ಮೆಲೆ ಕೈಲಿಟ್ಟ. ಒಮ್ಮೆಲೆ ಭಯಬಂತು. 'ಅಯ್ಯಯ್ಯ ಇದೇನಾ, ನನ್ನ ಬ್ಯಾಡ್ರಿ... ರೊಕ್ಕಿಲ್ಲ...' ಅಂತ ವಾಪಾಸ್ ಕೊಡಾಕ ಅವಸರ ಮಾಡಿದೆ. ಆತ 'ಇರ್ಲಿ ತಗೋರಿ.. ನಿಮ್ಗೆ ರೊಕ್ಕ ಯಾರ್ ಕೇಳ್ಯಾರ... ಇನ್ನೂ ಕೂದ್ಲ ಚೆಂದ ಬೆಳಿತಾವು... ಏನೇನು ಭಯ ಇಲ್ದಂಗ ಹಚ್ಕಳ್ರಿ...' ಅಂತ ಗಾಡಿ ಏರಿಕೊಂಡು ಆಗಿಂದಾಗೆ ಬರಬರ ಹೋದ. ಇದು ಒಳ್ಳೆಕತೆ ಆಯ್ತೆಲ್ಲಂತ ಮನಿಗೆ ಬಂದೆ. 'ಹೇಳ್ದಕೇಳ್ದ... ಖೂನಗೊರ್ತು ಇಲ್ಲದವ್ನು... ಹತ್ತಿದವ್ನಲ್ಲ... ಹೊಂದಿದವ್ನಲ್ಲ... ನನಗ್ಯಾಕ ಈ ಕೂದಲೆಣ್ಣೆ ಕೊಟ್ಟ ಏನ್ಕತೆ...' ಅಂತ ಬಾಳೊತ್ತು ತಲಿ ಕೆಡಿಸಿಕೊಂಡೆ.

ಯಾಕಂತ ಗೊತ್ತಾಗಲಿಲ್ಲ. ಯಾಕೇನು ಬರುಬರುತ್ತ ಕೂದಲೆಣ್ಣೆ ಮಾರುವವನ ಕಡೆ ಗಮನ ಹೆಚ್ಚಾತು. ನೋಡಾಕ ಚೆಂದಿದ್ದ. 'ಇನ್ನಾ ಸಣ್ಣವಯಸ್ಸು. ಮೈಬಣ್ಣದ ಕಸುವು ಇಳಿದಿರಲಿಲ್ಲ. ಬಲು ಗಡಸಾಗಿದ್ದ. ಎಷ್ಟು ಚೆಂದದ ಕೂಗು... ನಮ್‌ದೈತಿ ಬಡಕಲ ನಾಯಿಯಂಥದು...' ಅಂತ ತಿಜೋರಿಗೆ ಅಂಟಿಸಿದ ನಿಲುಗನ್ನಡಿ ಮುಂದನಿಂತು ಕೂದಲು ಒಪ್ಪಮಾಡಿ, ಮೇಲಕ್ಕೇರಿಸಿ, ಇಳಿಸಿ ಪಟಪಟ ಜಾಡಿಸಿ ಕಟ್ಟಿಕೊಳ್ಳುತ್ತ... ನಿಚ್ಚಳವಾಗಿದ್ದ ಗೋಧಿ ಬಣ್ಣದ ಮಾರಿ ನೋಡಿಕೊಂಡೆ. ಮುಖದಾಗಿನ ಚೆಲುವೇನು ಕಮ್ಮಿರಲಿಲ್ಲ. ಮೈಯೆಂಬುದು ಮದ್ವೆಗೆ ಹಚ್ಚಿದ ಅರಿಶಿಣ ಮೈಯ್ಯಾಗಿ ಮಿಣಮಿಣ ಉಕ್ಕುತ್ತಿತ್ತು. ಹಿಂಗ ನನ್ನನ್ನು ನಾನೇ ನೋಡಿ ಮೈಮರೆತು ನಿಂತಿರಬೇಕಾದ್ರ ಟೀವ್ಯಾಗಿದ್ದ ಯಾವಳೋ ಹಿರೋಯಿನ್ ಅನ್ನೋಳು ಈಟುದ್ದ ಮೇಂದಿ ಕೂದಲು ಇಳಿಬಿಟ್ಟು ಮೈಯ್ಯಾಗ ಖಬರಿಲ್ದಂಗ, ಕುಂಡ್ಯಾಗ ಪಾವುಖಂಡ ಇಲ್ದಂಗ ಕುಣಿತಿದ್ಲು. ಇಕಿನ ಬಾಳೊತ್ತು ನೋಡಿದೆ. ಕೊನಿಗೆ ನಿನ್‌ಸೋಗು ನೋಡಲಾರೆ ಬೋಸುಡಿಕೆ ಅಂತ ಟೀವಿ ಬಂದುಮಾಡಿದೆ.

ಅದೆಲ್ಲಿತ್ತೋ ಏನೋ ಅವಸರಗೇಡಿ ಗಂಡನಂಬೋದು ಪಸಕ್ಕನ ಬಾಗ್ಲು ತೆರದಾಗಲೆ, ಹೊರಗ ಗವ್ವನ ಕತ್ಲಾದ್ದು ಗೊತ್ತಾತು. ಸೀದಾ ಬಂದವನೆ ಊಟಕ್ಕಿಡು ಅನ್ನಲಿಲ್ಲ. ಹೊರಗ ಗೆಳೇರು ಕೂಡ ಎಗ್‌ರೈಸು ಪಗ್‌ರೈಸು ತಿಂದು ಬಂದಿರಬೇಕು, ಹೊಟ್ಟೆ ಗಡಿಗಿಯಂಗ ಉಬ್ಬಿತ್ತು. ಬಂದವನೆ ಟೀವಿ ಹಚ್ಚಿ ಗಾದಿಮ್ಯಾಲೆ ದಪ್ಪನ ಬಿದ್ದ. ಟೀವಿ ಖಬರಿರಲಿಲ್ಲ. ಈಟುದ್ದ ಮೊಬೈಲಿನ್ಯಾಗ ಏನೆನೋ ಗೀಚುತ್ತ ಬೋರಲು ಬಿದ್ದಿದ್ದ. ನಾನಾದ್ರೂ ಧಾರಾವಾಹಿ ನೋಡನಂಥ ರಿಮೋಟ್ ಒತ್ತಿದೆ. ಹೊಸ ಧಾರಾವಾಹಿಯಾಗ ಬಂದ ಅಡ್ನಾಡಿ ಹೆಂಗ್ಸು ಅಂಡಬಂಡದ ಸೀರಿ ಉಟ್ಟು, ಕಂಪನ್ಯಾಗಿದ್ದ ಗಂಡ್ಸುಮುಂದ ಧಿಮಾಕ್ ಮಾಡಾತಿದ್ಲು. ಇಕಿನ ನೋಡುತ್ತಲೇ ಮೈ ಚುಳಕ್ಕನ ಕಡಿದಂಗಾತು. ಹೊಟ್ಯಾಗ ಹಸಿವಿದ್ದಿಲ್ಲ. ಹಗಲು ಅಡಿಗೆಮಾಡಿದ್ದು ಕೆಡ್ಸಬರ್ದಂತ ಒಂದೀಟು ತಿಂದೆ. ಆಮ್ಯಾಲೆ ತುರುಬು ಬಿಚ್ಚಿದೆ. ಕೂದಲು ಎಂಬವು ಸಳಸಳಂತ ಹಳ್ಳದ ನೀರು ಹರದಂಗಾತು. ಮಾರೋನು ಕೊಟ್ಟಿದ್ದ ಕೂದಲೆಣ್ಣೆ ನೆಪ್ಪಾತು. ಆತನ ಕಡೆ ಮನಸಾಗಿ ಒಂದೀಟು ಸವರಿಕೊಂಡೆ. ಹಗಲುರಾತ್ರಿ ಗಜಿಗಿಜಿ ಒದರಾಡುತಿದ್ದ ಟೀವಿ ಸಾಕಾಗಿ ಡೆಮ್ಮಂತ ಬಂದುಮಾಡಿ ಜಗಲಿಗಿದ್ದ ಅಕ್ಕಮಾದೇವಿನ ನೋಡುತ್ತ ಗಾದಿಮ್ಯಾಲೆ ಉಸ್ಸಂತ ಮಲಗಿದೆ. ಕೂದಲು ತಣ್ಣಗೆ, ಘಮ್ಮಂತ ಮೆತ್ತಗಾಗಿ ಹೂವಿನಮ್ಯಾಲ ರಾಣಿತರ ಮಲಿಗಿದಂಗಾತು.

ಪಕ್ಕಕ ಎಮ್ಮೆಂಗ ಬಿದ್ದಿದ್ದ ಗಂಡನಂಬೋದು ಟೀವಿ ಬಂದುಮಾಡಿದ ಸಿಟ್ಟಿಗೆ ಪಸಕ್ಕನ ಎದ್ದುಕೂತ. ಮೂಗು ಒಂದಸವನ ಪಟಪಟ ಬಡಕಂದು 'ಕಸ ಬೆಳ್ದಂಗ ಬೆಳೆದ ಕೂದ್ಲಿಗೆ ಅದೇನು ಹಚ್ಚಿದಿ ಸುಡುಗಾಡೆಣ್ಣೆ...' ಅಂತ ಚಿತ್ತಿನಾಯಿ ಒದ್ದಾಡಿದಂಗ ಒದ್ದಾಡಿ, ಸಿಟ್ಟು ಇಳ್ದಮ್ಯಾಲೆ ಕುಂಡಿಮೀಟಿ ಸೀರ್ಯಾಗ ಪೂರ ಕೈಯಾಕಿದ.